## ಮೈಸೂರು ಡಿಸ್ಟ್ರಿಕ್ಟ್.

### ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 45.

ಮೃತಪಟ್ಟ ಪುಟ್ಟೇಗವ್ವಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಚವ್ವಡೆಸವ್ವಡರು, ಮೃತಪಟ್ಟ ಸದರೀ ಪುಟ್ಟೇಗವ್ವಡರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮಳವಳ್ಳಿ ಕಸಬೆ ಸ್ಥಳದ ಸದರೀ ಚವ್ವಡೆಗವ್ವಡರು ಸದರೀ ವಾಸಸ್ಥರಾಗಿ ಮೃತಪಟ್ಟ ಪುಟ್ಟೇಗವ್ವಡರ ಜಿಂದಗಿ ಟಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚವ್ವಡೆಗವ್ವಡರ ಅರ್ಜೀಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟೇಗವ್ವಡರ ಆಸ್ತಿಗೆ ಹಕ್ಕುದಾರರಾದ ವಿಸಪ್ಟ್ರರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇಧೆ.

1889ನೇ ಇಸವಿ ಫಿಬ್ರುವರಿ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟುವೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿಧೆ.

---

1889ನೇ ಇಸವಿ ಅರ್ಜೀ ನಂಬರ್ 51.

ಮೃತಪಟ್ಟ ಸಾಹುಕಾರ ಸೈದ್ ರಸೂಲ್‌ಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಖಾತುನಾಬಿಯು, ಮೃತಪಟ್ಟ ಸದರೀ ಸೈದ್ ರಸೂಲ್ ಸಾಬರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣ ತಾ|| ಹಿರೋಡೆ ಸ್ಥಳದ ಸದರೀ ಖಾತುನಾಬಿ ಸದರೀ ವಾಸಸ್ಥರಾಗಿ ಮೃತಪಟ್ಟ ಸೈದ್ ರಸೂಲ್‌ಸಾಬರ ಜಿಂದಗಿ ಬ್ಯಾಗ್ಯಾಗಿ ಬರತಕ್ಕ 4506 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಖಾತುನಾಬಿಯ ಅರ್ಜಿಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೈದ್ ರಸೂಲ್ ಸಾಬರ ಆಸ್ತಿಗೆ ಹಕ್ಕುದಾರರಾದ ವಿಪ್ಟ್ರರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ಮಾರ್ಚಿ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟುವೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಹೇನುಜಿರಾವ್, ಡಿಸ್ಟ್ರಿಕ್ಟ್ ಜಡ್ಜ.

---

## ಹಾಸನ ಡಿಸ್ಟ್ರಿಕ್ಟ್.

ತಾರೀಖು 16ನೇ ಫಿಬ್ರುವರಿ 1889.

ಯಿದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಮೆ|| ದಿರ್ವಾನಾಹೆಬರವರ ಹುಕುಂ ಬಮೋಜಿಬ್ ಹಾಸನ ಡಿಸ್ಟ್ರಿಕ್ಟಿನ ಪೈಕಿ ಮಂಜಿರಾಬಾದು ತಾಲ್ಲೂಕಿಲ್ಲಿ ಇರುವ ಮೂರನಹಳ್ಳಿ ಛಾವಿಯಲ್ಲಿ ಟೋಲ್‌ಗೇಪ್ ಯೆಂಬ ಸುಂಕದ ಕಟೆ ವಳಗೆ ಸ್ ೧೮೮೯ನೇ ಇಸವಿ ಏಪ್ರೆಲ್ ಮಾಹೆ 1ನೇ ಮರ್ಕುಂ ಲಾಗಾಯತು 1890ನೇ ಇಸವಿ ಮಾರ್ಚಿ 31ರವರಿಗೆ ಸುಂಕ ವಸೂಲ್‌ಮಾಡುವ ಸ್ವಾತಂತ್ರ್ಯವು 1889ನೇ ಇಸವಿ ಮಾರ್ಚಿ ತಾ.೧೯ಖು 27ರಲ್ಲಿ ಸಕಲೇಶಪುರದ ಮೊಕ್ತಾಮಿನಲ್ಲಿ ತಾಲ್ಲೂಕು ಕಛ್ಚೆರಿವಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲೀ ಹಕ್ಕನ್ನ ಕೊಂಡುಕೊಳ್ಳುವ ಕಂಟ್ರ್ಯಾಕ್ಟುದಾರನು ಇದಕ್ಕೆ ಲಗತ್ತಾಗಿರುವ ಪೆಡ್ಯೂಲಿನಲ್ಲಿ ನಮೂದಾಗಿರುವ ದರಗಳ ಮೇರಿಗೇನೇ ಟೋಲ್ ವಸೂಲ್ಮಾಡಬೇಕು. ಮತ್ತು ಸ್ ೧೮೭೬ನೇ ಇಸವಿ ನವಂಬರ್4ನೇ ಮರ್ಕುಂ 274ನೇ ನಂಬರ್‌ವುಳ್ಳ ಲೇಟ್ ಚೀಫ್ ಕಮ್ಮಿಷ್ಟರ್ ಸಾಹೆಬರವರ ನೋಟಿಫಿಕೇಷನಿನಲ್ಲಿ ಛಾಯಿಷ್ಮಾಗಿರುವ ರೂಲ್ಸ್‌ಪ್ರಕಾರ ನಡಬುಕೊಳ್ಳಬೇಕು.

3. ಚಡದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಹಾರ್ಸ ಡಿಸ್ಟ್ರಿಕ್ಟು ಆಫಿಸರವರು ಅಧಿಕಾರ ವುಳಿಸಿಕೊಂಡಿರುತ್ತಾರೆ.

4. ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದೋ ಅವನು ಕೂಡ್ಲೆ ದರಖಾಸ್ತು ಮೊಬಲಗಿನಲ್ಲಿ 4ರಲ್ಲಿ ಬಂದು ಅಂಕ ಮೊಬಲಗನ್ನ ಅಡ್ವನಸಾಗಿ ತೇವಣಿಯಿಟ್ಟು ಬಾಕಿ ಮೊಬಲಗನ್ನ 1889ನೇ ಇಸವಿ ಏಪ್ರೆಲ್ 20ರ ಲಾಗಾಯತು ಸವಾನಾದ 6 ಖಿಸ್ತು ಗಳಾಗಿ ಪ್ರತಿ ತಿಂಗಳ 20ನೇ ತಾರೀಖಿಗೆ ಪಾವತಿ ಮಾಡಬೇಕು. ದರಖಾಸ್ತುದಾರನು ಪ್ರತಿ ಮಾಹೆವಾರಿ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಲಾಯಖಾದ ಒಬ್ಬನನ್ನ ಜಾಮೀನ್ ಕೊಡಬೇಕು. ಸದರೀ ಜಾಮೀನ್ ದಸ್ತ್ಯೆವಜು ಕ್ರಮವಾಗಿ ರಿಜಿಸ್ಟರು ಮಾಡಿಸಿ ಹಾಜರ್ ಪಡಿಸಬೇಕು.

5. ತೇವಣಿ ಇಡದೇ ಇದ್ದರೆ ಅಥವಾ ಜಾಮೀನ್ ಕೊಡದೆ ಇದ್ದರೆ ದರಖಾಸ್ತುದಾರನಿಗೆ ನುಕಸಾನುಕರವಾಗಿ ಕಂಟ್ರ್ಯಾಕ್ಟು 2ನೇ ಹರಾಜ್‌ಮಾಡಲ್ಪಡುವದು ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕಿಯಾದ ಮೊಬಲಗಿಗೆ ಪಾವತೀ ತಾರೀಖಿನ ವರಿಗೆ ತಿಂಗಳು ಒಂದಕ್ಕೆ ರೂಪಾಯಿ ಒಂದಕ್ಕೆ 1 ಕಾಸಿನಂತೆ ಬಡ್ಡಿ ವಸೂಲ್ಮಾಡಲ್ಪಡುವದು ಮತ್ತು ಜೆಪ್ಯುಟಿ ಕಮ್ಮಿಷನರವರು ತಮಗೆ ಯುಕ್ತ ತೋರುವ ಪ್ರಕಾರ ಅಥವಾ ಜಾಮೀನ್‌ದಾರನ ಅಪೇಕ್ಷೆ ಪ್ರಕಾರ ಕಂಟ್ರ್ಯಾಕ್ಟು 2ನೇ ಹರಾಜ್ ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು, ಅವರಿಂದ ಯೇನಾದರೂ ನಷ್ಟಸಂಭವಿಸಿದರೆ ಆದು ಕಂಟ್ರ್ಯಾಕ್ಟುದಾರನಿಂದ ಅಥವಾ ಜಾಮೀನ್‌ದಾರನಿಂದ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡತಕ್ಕದ್ದು.